# ವಿಶ್ವನಂದಿನಿ ಲೇಖನಮಾಲೆ – 217

## ಶ್ರೀ ವಿಶ್ವೋತ್ತಮತೀರ್ಥರೆಂಬ ದಿವ್ಯ ಚೇತನ



ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ದಿವ್ಯ ಪರಂಪರೆಯಾದ, ಶ್ರೀಮದ್ ವಿಷ್ಣುತೀರ್ಥ-ಸಂಸ್ಥಾನದ, ಶ್ರೀ ಸೋದಾ ವಾದಿರಾಜಮಠದಲ್ಲಿ ನಮ್ಮ ಕಾಲದಲ್ಲಿಯೇ ಆಗಿಹೋದ ಮಹಾತಪಸ್ವಿಗಳು ಶ್ರೀ ವಿಶ್ವೋತ್ತಮತೀರ್ಥ-ಶ್ರೀಪಾದಂಗಳವರು.

ಅವರೊಂದು ದಿವ್ಯಚೇತನ. ನನ್ನ ಜೀವನದಲ್ಲಿ ನಾನು ಕಂಡ ಮಹಾನುಭಾವರ ಸಾಲಿನ ಮೊದಲಪಂಕ್ತಿಯಲ್ಲಿ ವಿರಾಜಿಸುವ ಮಹಾನುಭಾವರು ಪ್ರಾತಃಸ್ಮರಣೀಯರಾದ ಶ್ರೀ ವಿಶ್ವೋತ್ತಮತೀರ್ಥಶ್ರೀಪಾಂದಗಳವರು.

ನಾನು ಆ ಮಹಾನುಭಾವರನ್ನು ಕಂಡಿರುವದು ನಾಲ್ಕೇ ಬಾರಿ. ಅವರು ನನ್ನನ್ನು ಮಾತನಾಡಿಸಿದ್ದು ಎರಡು ಬಾರಿ. ಮೊದಲ ಬಾರಿ ಅವರು ಮಾಡುತ್ತಿದ್ದ ಪರಮಾದ್ಭುತ ಪೂಜೆಯನ್ನು ಶ್ರೀ ಸೋದಾಕ್ಷೇತ್ರದಲ್ಲಿ ಕಂಡಿದ್ದೆ. ನನ್ನ ಹನ್ನೊಂದನೆಯ ವಯಸ್ಸಿನಲ್ಲಿ ನನಗಾಗಿದ್ದ ಆ ರೋಮಾಂಚನದ ಅನುಭವ ಇವತ್ತಿಗೂ ನನ್ನಲ್ಲಿ ಜೀವಂತವಿದೆ.



ದೇವರ ಪೂಜೆ ಮಾಡಿದರೆ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದರಂತೆ ಮಾಡಬೇಕು ಎಂಬ ಭಾವ ಅಂದಿನಿಂದ ನನ್ನ ಮನಸ್ಸಿನಲ್ಲಿ ಗಾಢವಾಗಿ ಕುಳಿತುಬಿಟ್ಟಿದೆ.

ಎರಡನೆಯ ಬಾರಿ ಶ್ರೀಮದುಡುಪಿಯಲ್ಲಿ ಕಂಡು ನಮಸ್ಕರಿಸಿದ್ದೆ. ಈ ಎರಡೂ ಪ್ರಸಂಗಗಳಲ್ಲಿ ನಾನಿನ್ನೂ ಸಣ್ಣ ಹುಡುಗ.

ಮೂರನೆಯ ಪ್ರಸಂಗ ನನ್ನ ಜೀವನದ ಅವಿಸ್ಮರಣೀಯ ಘಟನೆ. ಪ್ರಾಯಃ ನಾನು ಬದುಕಿರುವವರೆಗೂ ಮೆಲುಕು ಹಾಕಿ ಆಸ್ವಾದಿಸುವ ಘಟನೆ.

ನನಗಾಗ ಸುಮಾರು 25 ವರ್ಷ ವಯಸ್ಸು. ನಾನು ಸ್ವಂತವಾಗಿ ಅಧ್ಯಯನ ಮಾಡುತ್ತಿದ್ದ ಕಾಲ. ಶ್ರೀ ವಾದಿರಾಜಗುರುಸಾರ್ವಭೌಮರ ಸೇವೆಯ ಫಲವಾಗಿಯೇ ಶ್ರೀಮಧ್ವಶಾಸ್ತ್ರದ ಅಧ್ಯಯನದ ಸೌಭಾಗ್ಯವನ್ನು ಪಡೆದವನು ನಾನು. ಹೀಗಾಗಿ ಆಗಾಗ ಗುರುರಾಜರ ಸೇವೆಗಾಗಿ ಹೋಗುತ್ತಿರುತ್ತೇನೆ. ಆ ವರ್ಷವೂ ಸೇವೆಗಾಗಿ ತೆರಳಿದ್ದೆ. ಸೇವೆಯ ಎರಡನೆಯ ದಿವಸ ಪರಮಪೂಜ್ಯ ಶ್ರೀಪಾದರು ಸೋದೆಗೆ ಆಗಮಿಸಿದರು. ಆ ದಿವಸವಂತೂ ಮನಃಪೂರ್ತಿಯಾಗಿ ಶ್ರೀ ಭೂವರಾಹ-ನರಸಿಂಹದೇವ- ಹಯಗ್ರೀವ-ರಾಮದೇವರ ಪೂಜೆಯನ್ನು ಕಂಡು ಮನಸ್ಸು ದಿವ್ಯಾನುಭೂತಿಯನ್ನು ಪಡೆದಿತ್ತು.

ಅದೇ  ದಿವಸ ಮಧ್ಯಾಹ್ನ ಸುಮಾರು 2 ಗಂಟೆಯ ಸಮಯ. ಶ್ರೀರಾಜರಿಗೆ ನಮಸ್ಕಾರ ಮಾಡಲು ತೆರಳುತ್ತಿದ್ದೆ. ಪೂಜಾಮಂಟಪ ಮತ್ತು ಭೋಜನಶಾಲೆಯ ಮಧ್ಯದ ಜಗುಲಿಯಲ್ಲಿ ನಡೆದುಬರುತ್ತಿದ್ದೆ. ಜಗುಲಿಯ ಎಡಭಾಗದ ಕೋಣೆಯಲ್ಲಿ ಕುಳಿತಿದ್ದ ಶ್ರೀ ವಿಶ್ವೋತ್ತಮತೀರ್ಥಶ್ರೀಪಾದರು ನಾನು ಬರುವದನ್ನು ತಿಳಿದಿದ್ದವರಂತೆ ಬಾಗಿಲಿನ ಬಳಿ ಬಂದು ಒಳಗೆ ಬನ್ನಿ ಎಂದು ಕರೆದರು. ನಾನು ಒಳಗೆ ಹೋಗಿ ಅವರಿಗೆ ನಮಸ್ಕರಿಸಿ ಕುಳಿತೆ.

ಅವರು ನನ್ನನ್ನು ಯಾರು ಎಂದು ಕೇಳಲಿಲ್ಲ. ಎಲ್ಲಿ ವಾಸ ಎಂದು ಕೇಳಲಿಲ್ಲ. ಏನು ಮಾಡಿಕೊಂಡಿದ್ದೀರಿ ಕೇಳಲಿಲ್ಲ.

ಅವರು ಕೇಳಿದ ಮೊದಲ ಪ್ರಶ್ನೆ, ಶ್ರೀ ವಾದಿರಾಜರ ಬಗ್ಗೆ ನಿಮಗೇನು ಗೊತ್ತು ಹೇಳಿ ಎಂದು.

ಈ ಪ್ರಶ್ನೆಯಿಂದ ಮಾತನ್ನು ಆರಂಭಿಸಿದ ಅವರು ಸುಮಾರು ಮೂರುಗಂಟೆಗಳ ಕಾಲ ಮಾತನಾಡಿದರು. ನನ್ನ ಹತ್ತಾರು ವರ್ಷಗಳ

ಅಧ್ಯಯನದಲ್ಲಿ ನಾನು ಕಲಿಯಲಿಕ್ಕೆ ಸಾಧ್ಯವಾಗದ್ದನ್ನು ಅವರೊಡನೆಯ ಮೂರು ಗಂಟೆಗಳ ಸಂವಾದದಿಂದ ಕಲಿತಿದ್ದೇನೆ. ಅವರ ಮಾತುಗಳನ್ನು ನೆನಪಿಸಿಕೊಂಡು ನೆನಪಿಸಿಕೊಂಡು ಅದರ ಅರ್ಥವಿಸ್ತಾರಗಳನ್ನು ತಿಳಿಯಲು ಇಂದಿಗೂ ಪ್ರಯತ್ನಿಸುತ್ತಿರುತ್ತೇನೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನನ್ನ ಜೀವನದ ಅವಿಸ್ಮರಣೀಯ ಮೂರು ಗಂಟೆಗಳವು. ಶ್ರೀ ರಾಜರಿಗೆ ಮಾಡಿದ್ದ ಸೇವೆಯ ಪ್ರತಿಫಲವಾಗಿ ಶ್ರೀ ವಿಶ್ವೋತ್ತಮ-ತೀರ್ಥಶ್ರೀಪಾದರು ನನ್ನೊಡನೆ ಅಷ್ಟು ಮಾತನಾಡಿದ್ದರು. ಸಂವಾದದ ಮಧ್ಯದಲ್ಲಿಯೇ ಅವರ ಪ್ರಭಾವ ನನ್ನ ಮೇಲೆ ಎಷ್ಟಾಯಿತೆಂದರೆ, ಅವರಿಗೆ ನಮಸ್ಕರಿಸಿ ವಿನಂತಿಸಿದೆ, ಸ್ವಾಮಿ, ದಯವಿಟ್ಟು ಬಹುವಚನದಲ್ಲಿ ಕರೆಯಬೇಡಿ ಎಂದು. ಮುಗಳ್ನಕ್ಕ ಸ್ವಾಮಿಗಳು ಆತ್ಮೀಯತೆಯಿಂದ ಏಕವಚನದಲ್ಲಿಯೇ ಸಂಬೋಧಿಸಿದರು, ಅನುಗ್ರಹಿಸಿದರು.

ಪೂಜ್ಯರ ಮೊದಲನೆಯ ಪ್ರಶ್ನೆಯ ಉತ್ತರವಾಗಿ ನಾನು ಶ್ರೀವಾದಿರಾಜಗುರುಸಾರ್ವಭೌಮರ **ನೆನೆವನನುದಿನ ನೀಲನೀರದವರ್ಣನ** ಎಂಬ

ಕೃತಿಯಲ್ಲಿ ನನಗೆ ತೋರಿದ್ದ ಶ್ರೀರಾಜರ ಜ್ಞಾನ ಮಾಹಾತ್ಮ್ಯವನ್ನು ಅವರ ಮುಂದೆ ಅರುಹಿಕೊಂಡೆ. ಅದರಲ್ಲಿ ಶ್ರೀಕೃಷ್ಣನ ಕಥೆಯನ್ನು ಹೇಳಬೇಕಾದರೆ, ಮೊದಲಿಗೆ ಕುಬ್ಜೆಯ ಉದ್ಧಾರ, ಆ ನಂತರ ಆನೆಯ ಪ್ರಸಂಗ, ಆ ನಂತರ ಕಂಸನ ಬಳಿಯಿದ್ದ ಶಿವಧನುಷ್ಯದ ಭಂಗವನ್ನು ತಿಳಿಸಲಾಗಿದೆ. ವಸ್ತುಸ್ಥಿತಿಯಲ್ಲಿ ಆನೆಯ ಪ್ರಸಂಗ ಕುಬ್ಜೆಯ ಉದ್ಧಾರಕ್ಕಿಂತಲೂ ಮುಂಚೆ ಅಗಸನಿಂದ ಬಟ್ಟೆ ತೆಗೆದುಕೊಳ್ಳುವಾಗ ಬರುತ್ತದೆ, ಧನುಷ್ಯದ ಭಂಗವಾದ ಮೇಲೆ ರಂಗಪ್ರವೇಶವನ್ನು ಮಾಡಬೇಕಾದರೆ ಕುವಲಯಾಪೀಡವನ್ನು ಕೊಂದದ್ದರ ಘಟನೆ ಬರುತ್ತದೆ. ಅಂದರೆ ಕುಬ್ಜೆ ಮತ್ತು ಧನುಷ್ಯದ ಪ್ರಸಂಗಗಳ ಮಧ್ಯದಲ್ಲಿ ಆನೆಯ ಘಟನೆಯೇ ಇಲ್ಲ. ಕುಬ್ಜೆಯ ಘಟನೆಗಿಂತ ಮೊದಲು, ಧನುಷ್ಯದ ಘಟನೆಯ ನಂತರ ಆನೆಯ ಘಟನೆಗಳಿವೆ. ಆದರೆ ಎರಡೂ ಪ್ರಸಂಗಕ್ಕೆ ಅನುಕೂಲವಾಗುವಂತೆ ಆನೆಯ ಪ್ರಸಂಗಗಳನ್ನು ಶ್ರೀ ರಾಜರು ಮಧ್ಯದಲ್ಲಿಟ್ಟು ಯಾಕೆ ತಿಳಿಸಿದ್ದಾರೆ ಎಂದು ಅವರ ಮುಂದೆ ನನಗೆ ಅರ್ಥವಾದಷ್ಟನ್ನು ಪೂಜ್ಯ ಶ್ರೀಪಾದರ ಮುಂದೆ ನಿವೇದಿಸಿಕೊಂಡೆ.

ಶ್ರೀಮದ್ವಾದಿರಾಜರ ಜ್ಞಾನವೈಭವದ ಕುರಿತು ಮಾತನಾಡುವ ಯೋಗ್ಯತೆಯೂ ನನ್ನದಲ್ಲ, ಶ್ರೀ ವಿಶ್ವೋತ್ತಮತೀರ್ಥರಂತಹ ಅನುಭಾವಿಗಳ ಮುಂದೆ ಕುಳಿತು ಮಾತನಾಡುವ ಅರ್ಹತೆಯೂ ನನಗಿಲ್ಲ. ಆದರೆ, ನನ್ನಂತಹವನು ಹೇಳುತ್ತಿದ್ದನ್ನೂ ಸಹ ಅವರು ಕೇಳಿದ ಪರಿ ಮಾತ್ರ ನನ್ನ ಮೇಲೆ ಅದ್ಭುತ ಪರಿಣಾಮವನ್ನು ಬೀರಿದೆ.
ಶ್ರೀ ರಾಜರ ಮಾಹಾತ್ಮ್ಯವನ್ನು ಕೇಳಬೇಕಾದರೆ ಅವರ ಇಡಿಯ ದೇಹದಲ್ಲಿ ಅವರಿಗೆ ರಾಜರ ಕುರಿತು ಇದ್ದ ಭಕ್ತಿ  ತೋರುತ್ತಿತ್ತು. ಶ್ರೀವಾದಿರಾಜರ ಹೆಸರು ಕೇಳಿದಾಗಲೊಮ್ಮೆ ಅವರ ಕಣ್ಣಿನಲ್ಲಿ ಪ್ರಕಾಶ ಇಮ್ಮಡಿಸುತ್ತಿತ್ತು.

ನಾವು ಶಾಸ್ತ್ರದಲ್ಲಿ ಕೇಳುತ್ತೇವೆ. ಯಾವುದೇ ಭಕ್ತ ಶ್ರೀರಾಮಚಂದ್ರನ ಗುಣಗಾನವನ್ನು ಮಾಡುತ್ತಿದ್ದರೆ ಆ ರಾಮದಾಸ ಹನುಮಂತ ಭಕ್ತಿಯಿಂದ ಕುಳಿತು ಆ ರಾಮಕಥೆಯನ್ನು ಕೇಳುತ್ತಾನೆ ಎಂದು.
ಶ್ರೀಮದ್ವಾದಿರಾಜರ ಮಾಹಾತ್ಮ್ಯವನ್ನು ಕೇಳಬೇಕಾದರೆ ಶ್ರೀ ವಿಶ್ವೋತ್ತಮತೀರ್ಥ-ಶ್ರೀಪಾದರಲ್ಲಿ ಇದೇ ರೀತಿಯ ತನ್ಮಯತೆಯನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಶ್ರೀ ವಾದಿರಾಜಗುರುಸಾರ್ವಭೌಮರ ಒಂದೊಂದು ವಾಕ್ಯದಲ್ಲಿನ ಹತ್ತಾರು ಅಂತರಂಗದ ಅರ್ಥಗಳನ್ನು ತಿಳಿದಿದ್ದ ಮಹಾನುಭಾವರು ಅವರು. ಆ ಸಂವಾದದಲ್ಲಿಯೇ ನನಗದರ ಪರಿಚಯ-ವಾಯಿತು. ಅವರ ಜ್ಞಾನದ ಮುಂದೆ ಅತೀ ಸಣ್ಣವನಾದ ನಾನು ಶ್ರೀವಾದಿರಾಜರ ಕುರಿತು ಮಾತನಾಡಿದಾಗಲೂ ಅದೆಷ್ಟು ತನ್ಮಯತೆಯಿಂದ ಕೇಳಿದರು ಎನ್ನುವದನ್ನು ವರ್ಣಿಸಲು ಅಸಾಧ್ಯ. ಪ್ರಾಯಃ ಭಕ್ತಿಯಲ್ಲಿ ಆ ಮಟ್ಟವನ್ನು ಏರುವದು ಸಾಮಾನ್ಯರಿಗೆ ಅಸಾಧ್ಯವೇ ಸರಿ.

ಕಾರಣ, ಮನುಷ್ಯ ತನಗೆ ಸ್ವಲ್ಪ ತಿಳಿದಿದೆ ಎಂದರೆ ಮತ್ತೊಬ್ಬರು ಹೇಳುವದನ್ನು ಕೇಳುವದೇ ಇಲ್ಲ, ಕೇಳುವ ಅನಿವಾರ್ಯತೆ ಒದಗಿದ್ದಾಗಲೂ ಶ್ರದ್ಧೆಯಿಂದ ಕೇಳುವದಿಲ್ಲ. ಆದರೆ, ಒಬ್ಬ ಸಣ್ಣ ವ್ಯಕ್ತಿಯ ಬಾಯಿಂದ  ವಾದಿರಾಜರ ಹೆಸರು, ಮಾಹಾತ್ಮ್ಯ ಕೇಳಿದರೂ ಅವರ ಕಣ್ಣಿನಲ್ಲಿ ಪ್ರಕಾಶ ಮೂಡುತ್ತಿತ್ತು ಎಂದರೆ, ಅವರ ನಿಲುವಿನಿಂದಲೇ ಅವರಿಗಿದ್ದ ಭಕ್ತಿ ವ್ಯಕ್ತವಾಗುತ್ತಿತ್ತು ಎಂದಾಗ ಅವರು ಶ್ರೀ ಗುರುಸಾರ್ವಭೌಮರಲ್ಲಿ ಯಾವ ಮಟ್ಟದ

ಭಕ್ತಿಯನ್ನು ಮಾಡುತ್ತಿದ್ದರು ಎನ್ನುವದನ್ನು ಊಹಿಸಿಕೊಳ್ಳಲೂ ಅಸಾಧ್ಯ.

ಅವರು ಕೇಳಿದ ಎರಡನೆಯ ಪ್ರಶ್ನೆ. ನೀವು ಅಭ್ಯಂಗ ಮಾಡಿಕೊಳ್ಳಬೇಕಾದರೆ ಯಾವ ಶ್ಲೋಕ ಹೇಳುತ್ತೀರಿ ಎಂದು. ನಾನು

**ಅಶ್ವತ್ಥಾಮಾ ಬಲಿರ್ವ್ಯಾಸಃ**
**ಹನೂಮಾಂಶ್ಚ ವಿಭೀಷಣಃ ।**
**ಕೃಪಃ ಪರಶುರಾಮಶ್ಚ**
**ಸಪ್ತೈತೇ ಚಿರಜೀವಿನಃ ।**

ಎಂಬ ಶ್ಲೋಕವನ್ನು ಹೇಳಿದೆ. ಸ್ವಾಮಿಗಳು ಕೇಳಿದರು, ಈ ಶ್ಲೋಕದಲ್ಲಿ ತಾರತಮ್ಯ ಇಲ್ಲ. ತಾರತಮ್ಯೋಕ್ತವಾಗಿ ಚಿರಂಜೀವಿಗಳನ್ನು ನೆನೆಸುವ ಶ್ಲೋಕ ಇದೆ ನೋಡಿ ಎಂದು ಒಂದು ಶ್ಲೋಕವನ್ನು ಹೇಳಿದರು —

**ವ್ಯಾಸಃ ಪರಶುರಾಮಶ್ಚ**
**ಹನೂಮಾನ್ ದ್ರೋಣಜಃ ಕೃಪಃ ।**
**ಬಲಿರ್ವಿಭೀಷಣಶ್ಚೈವ**
**ಸಪ್ತೈತೇ ಚಿರಜೀವಿನಃ ।**

ಮೊದಲಿಗೆ ವ್ಯಾಸ-ಭಾರ್ಗವರೂಪದ ದೇವರು, ಆ ನಂತರ ಹನುಮರೂಪದ ಪ್ರಾಣದೇವರು, ಆ ನಂತರ ರುದ್ರಾವತಾರರಾದ ಅಶ್ವತ್ಥಾಮಾಚಾರ್ಯರು, ಆ ನಂತರ ಹದಿನೆಂಟನೆಯ ಕಕ್ಷೆಯಲ್ಲಿ ಬರುವ ವಿಷ್ಕಂಭ ಎಂಬ ರುದ್ರನ ಅವತಾರರಾದ ಕೃಪಾಚಾರ್ಯರು,  ಆ ನಂತರ ಹತ್ತೊಂಭತ್ತನೆಯ ಕಕ್ಷೆಯಲ್ಲಿ ಬರುವ ಬಲಿ ಮತ್ತು ವಿಭೀಷಣರು.

ಯಾವುದೇ ಕರ್ಮದ ಆಚರಣೆಯನ್ನು ಮಾಡಬೇಕಾದರೂ ಶ್ರೀಮದಾಚಾರ್ಯರ ತಾರತಮ್ಯಾದಿ ಸಿದ್ಧಾಂತಗಳ ಅನುಸಂಧಾನದೊಂದಿಗೇ ಮಾಡಿದರೇ ನಮಗೆ ಪೂರ್ಣ ಫಲ ದೊರೆಯುವದು. ಶ್ರೀಹರಿಯ ಸರ್ವೋತ್ತಮತ್ವ, ದೇವತೆಗಳ ತಾರತಮ್ಯ ಮುಂತಾದ ಆಚಾರ್ಯರ ಮಹಾ ಸತ್ಸಿದ್ಧಾಂತಗಳು ಜೀವನದ ಪ್ರತಿಯೊಂದು ಅನುಷ್ಠಾನದಲ್ಲಿ ಹಾಸುಹೊಕ್ಕಾಗಿರಬೇಕು, ಎಲ್ಲಿ ಈ ಸಿದ್ಧಾಂತಸಮೇತವಾಗಿ ನಿರೂಪಣೆಯಾದ ಶ್ಲೋಕಗಳಿವೆಯೋ ಅವನ್ನೇ ಬಳಸಬೇಕು ಎಂದು

ಹೇಳುವಾಗ ಅವರಿಗೆ ಆಚಾರ್ಯರ ಸಿದ್ಧಾಂತಗಳ ಕುರಿತು ಇದ್ದ ಭಕ್ತಿ ಅಪಾರವಾಗಿ ತೋರುತ್ತಿತ್ತು.

ಈ **ವ್ಯಾಸಃ ಪರಶುರಾಮಶ್ಚ** ಎನ್ನುವದು ನನಗೆ ಸಂಪೂರ್ಣವಾಗಿ ಹೊಸ ಶ್ಲೋಕ. ಅಲ್ಲಿಯವರಿಗೆ ಕೇಳಿರಲಿಲ್ಲ. ನಾನು ಪೂಜ್ಯರನ್ನು ಕೇಳಿದೆ, ಈ ಶ್ಲೋಕ ಎಲ್ಲಿಯದು ಎಂದು.

ಇದೊಂದೇ ಪ್ರಶ್ನೆಯನ್ನು ಮಾಡಿದ್ದು ನಾನು. ಆದರೆ ಉತ್ತರವಾಗಿ ಆ ಗುರುಗಳು ಅನುಗ್ರಹದ ಮಹಾಪೂರವನ್ನೇ ಹರಿಸಿಬಿಟ್ಟರು. ಮೂರುಗಂಟೆಗಳ ಆ ಭೋರ್ಗರೆವ ಜಲಪಾತದಲ್ಲಿ ನನ್ನ ಬುದ್ಧಿಯ ಸಣ್ಣ ಬೊಗಸೆಯಲ್ಲಿ ಎಷ್ಟು ತುಂಬಲು ಸಾಧ್ಯವೋ ಅಷ್ಟನ್ನು ಮಾತ್ರ ತುಂಬಿಸಿಕೊಂಡು ಬಂದೆ.

ಈ ಶ್ಲೋಕ ಸೋದೆ ಮಠದಲ್ಲಿ ಸಂಪ್ರದಾಯದಿಂದ ಪಠಿತವಾಗಿ ಬರುತ್ತಿರುವ ಶ್ಲೋಕ. **ಈ ಏಳು ಜನರ ಜೊತೆಯಲ್ಲಿ ಮಾರ್ಕಂಡೇಯ ಋಷಿಗಳನ್ನೂ ಸೇರಿಸಿ ಪಠಿಸುವ ಮತ್ತೊಂದು ಶ್ಲೋಕವನ್ನೂ ಸ್ವಾಮಿಗಳು ಉಲ್ಲೇಖಿಸಿದರು.** ಆ ಉಲ್ಲೇಖದ ಔಚಿತ್ಯವನ್ನೂ ತಿಳಿಸಿದರು.

ಹಾಗೆ ನೋಡಿದರೆ, ಪ್ರಹ್ಲಾದರಾಜರೂ ಕಲ್ಪಾಂತದ ಆಯುಷ್ಯ ಪಡೆದ ಕಲ್ಪಾಂತಜೀವಿಗಳು. ಮಾರ್ಕಂಡೆಯ ಮುಂತಾದ ಕೆಲವು ಋಷಿಗಳೂ ಸಹ ಆ ಸಾಲಿಗೆ ಸೇರುವವರು. ಚಿರಂಜೀವಿಗಳಿಗೂ ಕಲ್ಪಾಂತಜೀವಿಗಳಿಗೂ ಇರುವ ವ್ಯತ್ಯಾಸವೇನು, ವಿಶೇಷಗಳೇನು, ಅಭ್ಯಂಗದಲ್ಲಿ ಈ ಏಳು ಜನರ ಸ್ಮರಣೆಗೆ ಕಾರಣವೇನು ಇತ್ಯಾದಿ ಹತ್ತಾರು ಪ್ರಮೇಯಗಳನ್ನು ಶ್ರೀ ವಿಶ್ವೋತ್ತಮತೀರ್ಥ-ಶ್ರೀಪಾದರು ತಿಳಿಸಿದರು. ಅವು ಯಾವುವೂ ನಮಗೆ ಗ್ರಂಥಸ್ಥವಾಗಿ ದೊರೆಯದ ವಿಷಯಗಳು. ಆದರೆ ತಾವು ಹೇಳುತ್ತಿದ್ದ ಪ್ರತಿಯೊಂದು ಪ್ರಮೇಯಕ್ಕೂ ಶಾಸ್ತ್ರದ ಪ್ರಮಾಣಗಳನ್ನು ಒದಗಿಸಿ ಹೇಳುತ್ತಿದ್ದ ಪರಿ ಮಾತ್ರ ಅದ್ಭುತ.

**ಶ್ರೀ ವಿಶ್ವೋತ್ತಮತೀರ್ಥಶ್ರೀಪಾದಂಗಳವರ ವಿಷಯದಲ್ಲಿ ಎರಡು ಮಾತುಗಳನ್ನು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಒಂದು ಅವರಿಗೆ ಅತೀಂದ್ರಿಯಜ್ಞಾನವಿತ್ತು. ಎರಡನೆಯದು ಅವರು ಶ್ರೀ ಭೂತರಾಜರನ್ನು ಕಣ್ಣಾರೆ ಕಂಡಿದ್ದರು, ಮತ್ತು ಹತ್ತಾರು ಬಾರಿ ಅವರಿಂದ ರಕ್ಷಿತರಾಗಿದ್ದರು.**

ಅವರಿಗೆ ಅತೀಂದ್ರಿಯಜ್ಞಾನವಿತ್ತು ಎಂಬ ವಿಷಯ ನೂರಾರು ಭಕ್ತರ ಅನುಭವಕ್ಕೆ ಬಂದಿದೆ. ಅನೇಕರು ಅದನ್ನು ದಾಖಲಿಸಿದ್ದಾರೆ ಸಹಿತ.
ನಾನು ಈ ದಿವಸ ಪುಸ್ತಕ, ಲೇಖನಗಳನ್ನು ಬರೆಯುತ್ತಿದ್ದೇನೆ. ನಾನು ಶ್ರೀಪಾದರನ್ನು ಭೇಟಿಯಾದಾಗ ಇದ್ಯಾವ ಕೆಲಸವನ್ನೂ ಇನ್ನೂ ನಾನು ಅರಂಭಿಸಿರಲಿಲ್ಲ. ಆದರೆ ನಾನು ಪುಸ್ತಕಗಳನ್ನು, ಲೇಖನಗಳನ್ನು ಬರೆಯುತ್ತೇನೆ ಎಂದು ಅವರಿಗೆ ಮೊದಲೇ ತಿಳಿದಿತ್ತು ಎನ್ನುವದು ಮಾತ್ರ ಶತಶಃ ಸತ್ಯ.

ಒಂದು ಪುಸ್ತಕವನ್ನು ಬರೆಯಬೇಕಾದರೆ, ಲೇಖನಗಳನ್ನು ಬರೆಯಬೇಕಾದರೆ ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವದನ್ನು ಅವರು ಹೇಳಿರುವ ಮಾತುಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿವೆ. ಅವರ ಮಾತುಗಳು ನನಗೆ ದಾರಿದೀಪವಾಗಿವೆ.

**ಈ ದಿವಸ ವಿಶ್ವನಂದಿನಿಯ ಮುಖಾಂತರ ಈ ಜ್ಞಾನಕಾರ್ಯ ನಡೆಯುತ್ತಿದೆ ಎಂದರೆ ಅದಕ್ಕೆ ಶ್ರೀ**

**ವಿಶ್ವೋತ್ತಮತೀರ್ಥಶ್ರೀಪಾದಂಗಳವರ ಪರಮಾನುಗ್ರಹವೂ ಸಹ ಕಾರಣ. ಅವರ ಕಾರುಣ್ಯದಿಂದ ನುಡಿದ ಅನೇಕ ಮಾತುಗಳು ಆ ದಿವಸ ಅರ್ಥವಾಗಿರಲಿಲ್ಲ. ಈ ದಿವಸ ಅರ್ಥವಾಗುತ್ತಿದೆ.**

ಶ್ರೀ ಭೂತರಾಜರಲ್ಲಿ ಅವರಿಗಿದ್ದ ಭಕ್ತಿಯಂತೂ ಅನ್ಯಾದೃಶ. ಒಬ್ಬ ಮಗು ತನ್ನ ತಾಯಿಯಲ್ಲಿ ಎಷ್ಟು ಭರವಸೆಯ ಭಾವವನ್ನು ತಾಳಿರುತ್ತದೆಯೋ, ಅಷ್ಟು ಭದ್ರತೆಯ ಭಾವವನ್ನು ಅವರು ಭೂತರಾಜರಿಂದ ಪಡೆದಿದ್ದರು. ಅನುಭಾವಿಗಳ ಸಂಗಡ ಇದ್ದಾಗ ಅದೊಂದು ಬೇರೆಯೇ ಲೋಕ ಎನ್ನುವದನ್ನು ನಾನು ಶ್ರೀವಿಶ್ವೋತ್ತಮತೀರ್ಥರನ್ನು ಕಂಡು ಅರ್ಥ ಮಾಡಿಕೊಂಡಿದ್ದೇನೆ.

ಆ ದಿವಸದ ಸಂವಾದದಲ್ಲಿ ಮಾತೃಕೆಗಳ ಕುರಿತು, ಪಾಠಾಂತರಗಳ ಕುರಿತು, ಪಾಠಾಂತರಗಳ ಔಚಿತ್ಯವನ್ನು ನಿರ್ಧರಿಸಬೇಕಾದರೆ ಇರಬೇಕಾದ ಎಚ್ಚರಗಳ ಕುರಿತು, ಸೋದೆಮಠದ ಅದ್ಭುತ ಗ್ರಂಥಭಂಢಾರದ ಕುರಿತು ಶ್ರೀ ವಾದಿರಾಜಮಠದ ದಿವ್ಯ ಪರಂಪರೆಯ ಕುರಿತು, ಧವಳಗಂಗೆಯಲ್ಲಿನ

ಗಂಗಾಸಾನ್ನಿಧ್ಯದ ಕುರಿತು, ಅದಕ್ಕಿಂತ ಮಿಗಿಲಾಗಿ ಧವಳಗಂಗೆಯ ಪಕ್ಕದಲ್ಲಿರುವ ವೀಣಾಪಾಣಿ ಪ್ರಾಣದೇವರ ಜ್ಞಾನಪ್ರದ ಮಾಹಾತ್ಮ್ಯದ ಕುರಿತು ಅನೇಕ ಅಪೂರ್ವ ವಿಷಯಗಳನ್ನು ಶ್ರೀ ವಿಶ್ವೋತ್ತಮತೀರ್ಥಶ್ರೀಪಾದಂಗಳವರು ತಿಳಿಸಿದರು. ನನಗೆ ಸೋದಾಕ್ಷೇತ್ರದ ಕುರಿತು ಮೊದಲಿಂದ ಅಪಾರ ಶ್ರದ್ಧೆ, ಭಕ್ತಿ. ಆದರೆ, ಶ್ರೀ ವಿಶ್ವೋತ್ತಮತೀರ್ಥಶ್ರೀಪಾದರೊಡಗಿನ ಸಂವಾದಕ್ಕಿಂತ ಮುಂಚೆ ನನಗಿದ್ದ ಆ ಕ್ಷೇತ್ರದ ಕುರಿತ ಭಕ್ತಿ  ಆ ಸಂವಾದದ ನಂತರ ನೂರ್ಮಡಿ ಮಿಗಿಲಾಗಿದೆ.

ನಾನು ಮೊದಲೇ ಹೇಳಿದಂತೆ ನನ್ನ ಜೀವನದ ಸೌಭಾಗ್ಯದ ಮೂರುಗಂಟೆಗಳವು. ಆ ಸಂವಾದವನ್ನು ಆಗಾಗ ನೆನಪಿಸಿಕೊಂಡು ಆಸ್ವಾದಿಸುತ್ತಿರುತ್ತೇನೆ. ನಾನೇನು ಮಠಕ್ಕೆ ಹತ್ತಿರದ ವ್ಯಕ್ತಿಯಲ್ಲ, ಹೆಸರಿದ್ದವನಲ್ಲ, ಅವರ ಪರಿಚಯದವನೂ ಅಲ್ಲ. ಆದರೆ ತಾವಾಗಿಯೇ ಆಪ್ಯಾಯತೆಯಿಂತ ಕರೆದು ಅನುಗ್ರಹದ ಮಹಾಪೂರವನ್ನೇ ಹರಿಸಿದ ಆ ಗುರುಗಳ ಕಾರುಣ್ಯಕ್ಕೆ ಪ್ರತಿಯಾಗಿ ಸಾಷ್ಟಾಂಗ

ನಮನಗಳನ್ನಲ್ಲದೇ ಮತ್ತೇನನ್ನು ಅರ್ಪಿಸಲು ಸಾಧ್ಯ.

ಶ್ರೀ ವಿಶ್ವೋತ್ತಮತೀರ್ಥಶ್ರೀಪಾದರಲ್ಲಿದ್ದ ಒಂದು ಅದ್ಭುತ ಗುಣ, ಆವಶ್ಯಕತೆಗೆ ಮೀರಿ ಎಂದೂ ಮಾತನಾಡುತ್ತಿರಲಿಲ್ಲ ಮತ್ತು ಎಂದಿಗೂ ಹರಟೆ ಹೊಡೆದವರಲ್ಲ. ಅದೂ ಸಹ ಈ ದಿವಸವೇ ನನ್ನ ಅನುಭವಕ್ಕೆ ಬಂದಿತು. ಸಂವಾದದ ಕಟ್ಟ ಕಡೆಯಲ್ಲಿ ಶ್ರೀ ವಾದಿರಾಜರ ತೀರ್ಥಪ್ರಬಂಧದ **ರಕ್ಷೋಗಣಕ್ಷಪಣದಕ್ಷಮಹಾತ್ರಿಶೂಲಂ** ಎಂಬ ಶ್ಲೋಕದಲ್ಲಿ ಕ್ಷಕಾರದ ಉಪಯೋಗದ ಔಚಿತ್ಯವನ್ನು ತಿಳಿಸಿ ಹೇಳಿ, ಮಂತ್ರಾಕ್ಷತೆಯನ್ನು ನೀಡಿಯೇಬಿಟ್ಟರು.

ಅಂದರೆ ಶಾಸ್ತ್ರದ ಕುರಿತು ತಿಳಿಸಬೇಕು ಎನ್ನುವದಕ್ಕಷ್ಟೇ ಮಾತು ಹೊರತು, ಹರಟೆಗಲ್ಲ ಎನ್ನುವದನ್ನು ಅವರು ಅಕ್ಷರಶಃ ಪಾಲಿಸುತ್ತಿದ್ದರು. ಅವರು ಮಾತನ್ನು ಆರಂಭಿಸಿದ್ದೂ ವಾದಿರಾಜರ ಕುರಿತ ಪ್ರಶ್ನೆಯಿಂದ, ಮುಗಿಸಿದ್ದೂ ವಾದಿರಾಜರ ಮಾಹಾತ್ಮ್ಯವರ್ಣನೆಯೊಂದಿಗೆ. ನೀವು ಯಾರು, ಏನು ಮಾಡುತ್ತೀರಿ ಎಂದು ಆರಂಭಿಸಲಿಲ್ಲ, ಹೋಗಿ

ಬನ್ನಿ, ಮತ್ತೆ ಸಿಗೋಣ, ಮಠಕ್ಕೆ ಬರುತ್ತಿರಿ ಎಂಬ ಯಾವ ಮಾತೂ ಇಲ್ಲ.

ಮಾತನಾಡಿಸಲು ಹೋದ ತಕ್ಷಣ ಯಾರು ಎಂದು ತಿಳಿದುಕೊಂಡು, ಅವರ ಸಂಪಾದನೆಯನ್ನು ತಿಳಿದುಕೊಂಡು ತಮ್ಮ ಮಠದ ಶಿಷ್ಯರನ್ನಾಗಿ ಮಾಡಿಕೊಳ್ಳುವ ಕಾರ್ಯದಲ್ಲಿಯೇ ಬದುಕುವ ವ್ಯಕ್ತಿಗಳ ಸಾಲಿನಲ್ಲಿ ಶ್ರೀ ವಿಶ್ವೋತ್ತಮತೀರ್ಥರು ಸೇರುವದಿಲ್ಲ. ಅವರು ನನ್ನನ್ನು ಮಾತನಾಡಿಸಿದ್ದು ಕೇವಲ ಮೂರು ಗಂಟೆಗಳು. ಆದರೆ, ಇಡಿಯ ಜೀವನದಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿದ್ದಾರೆ.

ಆ ನಂತರ ಎರಡು ದಿವಸ ನಾನಲ್ಲಿದ್ದೆ. ತೀರ್ಥ,ಮಂತ್ರಾಕ್ಷತೆಗಳನ್ನು ನೀಡಬೇಕಾದರೆ ಮುಗಳ್ನಗೆಯಿಂದ ನೀಡುವದನ್ನು ಬಿಟ್ಟರೆ ಮಾತಿಲ್ಲ. ಸೇವೆ ಮುಗಿಸಿ ನಾಲ್ಕನೆಯ ದಿವಸ ಅವರಿಂದ ಮಂತ್ರಾಕ್ಷತೆಯನ್ನು ಸ್ವೀಕರಿಸುವಾಗ ಮಾತ್ರ ವಾದಿರಾಜರ ವಿಶೇಷ ಸೇವೆ ಮಾಡು ಎಂದು ಆಶೀರ್ವದಿಸಿ ಮಂತ್ರಾಕ್ಷತೆ ನೀಡಿದರು.

ಆ ನಂತರದಲ್ಲಿ ಅವರ ದರ್ಶನ ಪಡೆದದ್ದು ಬೆಂಗಳೂರಿನ ಅವರ ಮಠದಲ್ಲಿ. ಒಂದು ದಶಮಿಯ ರಾತ್ರಿ ಎಂದು ನೆನಪಿದೆ. ನಾನು ಸಂಪಾದಿಸಿ ಪ್ರಕಟಿಸಿದ್ದ ಶ್ರೀಮನ್ ನ್ಯಾಯಸುಧಾ ಪುಸ್ತಕವನ್ನು ಅರ್ಪಿಸಲು ತೆರಳಿದ್ದೆ. ಸ್ವಾಮಿಗಳು ಆ ಪುಸ್ತಕವನ್ನು ತೆಗೆದುಕೊಂಡು ಅದರಲ್ಲಿ ವಿಷಯಾನುಕ್ರಮಣಿಕೆಯನ್ನು ದೀರ್ಘವಾಗಿ ನೋಡಿ ಒಂದೆರಡು ಶಾಸ್ತ್ರೀಯ ವಿಷಯಗಳ ಕುರಿತು ಮಾತನಾಡಿದರು. ಪ್ರೀತಿಯಿಂದ ಮಂತ್ರಾಕ್ಷತೆ ನೀಡಿ ಅನುಗ್ರಹಿಸಿ ಕಳುಹಿಸಿದರು. ಯಥಾಪ್ರಕಾರ ಲೌಕಿಕದ ಮಾತಿಲ್ಲ. ಹರಟೆಯಿಲ್ಲ.

**ಅರತಿರ್ಜನಸಂಸದಿ, ಅತಃ ಕವಿರ್ನಾಮಸು ಯಾವದರ್ಥಃ ಸ್ಯಾತ್** ಎಂದೆಲ್ಲ ಏನು ನಾವು ಶಾಸ್ತ್ರದಲ್ಲಿ ಕೇಳುತ್ತೇವೆ, ಅವನ್ನು ಮೈಗೂಡಿಸಿಕೊಂಡು ಜೀವನದಲ್ಲಿ ಅನುಷ್ಠಾನಕ್ಕೆ ತಂದಿದ್ದವರು ಶ್ರೀ ವಿಶ್ವೋತ್ತಮತೀರ್ಥ-ಶ್ರೀಪಾದಂಗಳವರು.

ಇನ್ನವರ ನಿರ್ಯಾಣದ ಕ್ರಮವಂತೂ ಪರಮಾದ್ಭುತ. ಕಟ್ಟ ಕಡೆಯ ದಿವಸವೂ

ಸಂಪೂರ್ಣವಾದ ಆಹ್ನೀಕ, ಪೂಜೆಗಳನ್ನು ಮುಗಿಸಿ, ಭಕ್ತರಿಗೆ ಮಂತ್ರಾಕ್ಷತೆಗಳನ್ನು ಅನುಗ್ರಹಿಸಿ, ಕಟ್ಟ ಕಡೆಯ ಕ್ಷಣದಲ್ಲಿ ಶ್ರೀಹರಿಯ ಸ್ಮರಣೆ ಮಾಡಿ ದೇಹತ್ಯಾಗ ಮಾಡಿದ ಕ್ರಮ, ಅವರ ಸಾಧನಜೀವನ ಹೇಗಿತ್ತು ಎನ್ನುವದಕ್ಕೆ ಆ ಹಯಗ್ರೀವನೇ ನುಡಿದ ಸಾಕ್ಷಿ.

ಯಾವ ದೈಹಿಕ ಶ್ರಮವಿಲ್ಲದೇ, ನೋವಿಲ್ಲದೇ ಹರಿಸ್ಮರಣೆಯೊಂದಿಗೆ ಸಾಧನಜೀವನದ ಅವಭೃಥವನ್ನು ಮಾಡಿದ ಮಹಾತಪಸ್ವಿಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ ಎನ್ನುವದೇ ಮಹಾಸೌಭಾಗ್ಯದ ಮಾತು.

ನಾನೇ ಕಂಡಿರುವಂತೆ ಸಾವಿರಾರು ಸದ್ಭಕ್ತರು ಅತ್ಯಂತ ಪ್ರಾಮಾಣಿಕವಾಗಿ ಅವರಲ್ಲಿ  ಇಂದಿಗೂ ಭಕ್ತಿ ಮಾಡುತ್ತಾರೆ. ಸ್ವಯಂಪ್ರೇರಿತವಾಗಿ ಅವರ ದರ್ಶನಕ್ಕೆ ತೆರಳುತ್ತಾರೆ. ಯಾವ ಜನಜಂಗುಳಿಯ ಮಧ್ಯದಲ್ಲಿಲ್ಲದೇ, ಕೇವಲ ತಮ್ಮ ಸದ್ಗುಣಗಳಿಂದ ಜನಸಮೂಹದ ಮೇಲೆ ಅವರು ಬೀರಿರುವ ಪರಿಣಾಮ ನಿಜವಾಗಿಯೂ ಅಚ್ಚರಿ ಮೂಡಿಸುವಂತದ್ದು.

ಇಂತಹ ಘೋರ ಕಲಿಯುಗದಲ್ಲಿಯೂ ಏಕಾಂತ ಸಾಧನೆಯನ್ನು ಅವಶ್ಯವಾಗಿ ಮಾಡಿ ಹರಿಪ್ರಸಾದವನ್ನು ಪಡೆಯಬಹುದು ಎನ್ನುವದಕ್ಕೆ, ತನ್ನ ಭಕ್ತರಿಗೆ ಅಂತ್ಯಕಾಲದಲ್ಲಿ ಶ್ರೀಹರಿ ತನ್ನ ಸ್ಮರಣೆಯ ಸೌಭಾಗ್ಯವನ್ನು ಅನುಗ್ರಹಿಸುತ್ತಾನೆ ಎನ್ನುವದಕ್ಕೆ ಸಾಕ್ಷಿಯಾಗಿ ನಿಂತ ಚೇತನೋತ್ತಮರು ಶ್ರೀ ವಿಶ್ವೋತ್ತಮತೀರ್ಥಶ್ರೀಪಾದಂಗಳವರು.

ಆ ಗುರುಗಳ ಪರಮಾನುಗ್ರಹದಿಂದ ಲೌಕಿಕದ ಸಂಪರ್ಕ, ಹರಟೆಯಿಂದ ದೂರವಾಗಿ ಸದಾ ವಿಷ್ಣುಸ್ಮರಣೆಯೊಂದಿಗೆ ಶಾಸ್ತ್ರದ ಸೇವೆಯನ್ನು ಮಾಡುವ ಸೌಭಾಗ್ಯ ನಮ್ಮದಾಗಲಿ ಎಂದು ಅವರಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491